ದೂರವಾಣಿ/**Phone:** 0824–2287276
ಫ್ಯಾಕ್ಸ್/**Fax :** 0824–2287424
ಇ–ಅಂಚೆ/**E-mail :** registrar@mangaloreuniversity.ac.in
registrarmangaloreuniversity@gmail.com
ವೆಬ್ ಸೈಟ್/**Website :** www.mangaloreuniversity.ac.in

# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY
**(Accredited by NAAC with 'A' Grade)**

---

ಕ್ರಮಾಂಕ/**No.** ಎಂಯು/ಎಸಿಸಿ/ಎಎಫ್ಎಫ್/3/2019-20/J1

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ – 574 199
**Office of the Registrar**
**Mangalagangothri - 574 199**

ದಿನಾಂಕ/**Date :** 22/10/2018

## ಅಧಿಸೂಚನೆ

ವಿಷಯ: ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಹೊಸ ಕಾಲೇಜುಗಳ ಸಂಯೋಜನೆ, ಸಂಯೋಜಿತ ಕಾಲೇಜುಗಳಿಗೆ ಹೊಸ ವ್ಯಾಸಂಗ ಕ್ರಮ ಮತ್ತು ಹೊಸ ವಿಷಯಗಳು–ಮುಂದುವರಿಕೆ/ವಿಸ್ತರಣಾ ಸಂಯೋಜನೆ ಬಗ್ಗೆ ಅರ್ಜಿ ಆಹ್ವಾನ.

** ** ** **

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 59(3) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟ ಎಲ್ಲಾ ಕಾಲೇಜು / ವಿದ್ಯಾಸಂಸ್ಥೆಗಳಿಂದ **ಶೈಕ್ಷಣಿಕ ವರ್ಷ 2019–20ನೇ ಸಾಲಿಗೆ ಹೊಸ/ ವಿಸ್ತರಣಾ/ ಮುಂದುವರಿಕೆ/ ಶಾಶ್ವತ ಸಂಯೋಜನೆ** ಬಗ್ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಎಲ್ಲಾ ಕಾಲೇಜುಗಳು/ ಆಸಕ್ತ ವಿದ್ಯಾಸಂಸ್ಥೆಗಳು ಭರ್ತಿ ಮಾಡಿದ ಅರ್ಜಿ ನಮೂನೆಯನ್ನು 05 ಪ್ರತಿಗಳಲ್ಲಿ ಅರ್ಜಿ ಶುಲ್ಕ ರೂ. 1,000/– (ರೂಪಾಯಿ ಒಂದು ಸಾವಿರ ಮಾತ್ರ) ಹಾಗೂ ನಿಗದಿತ ಸಂಯೋಜನಾ ಶುಲ್ಕಗಳನ್ನು ಡಿ.ಡಿ./ ಚಲನ್ ಮುಖಾಂತರ ಪಾವತಿಸಿ ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574199 ಇವರಿಗೆ ಈ ಕೆಳಗೆ ಕಾಣಿಸಿದ ದಿನಾಂಕಗಳ ಒಳಗಾಗಿ ತಲುಪುವಂತೆ ಸಲ್ಲಿಸಲು ತಿಳಿಸಲಾಗಿದೆ.

**ದಂಡ ರಹಿತ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 19–11–2018**

**ಸಂಯೋಜನಾ ಶುಲ್ಕದ ಶೇಕಡಾ 10 ದಂಡ ಶುಲ್ಕದೊಂದಿಗೆ : ದಿನಾಂಕ 20–11–2018 ರಿಂದ 29–11–2018 ರ ವರೆಗೆ**

**ಸಂಯೋಜನಾ ಶುಲ್ಕದ ಶೇಕಡಾ 20 ದಂಡ ಶುಲ್ಕದೊಂದಿಗೆ : ದಿನಾಂಕ 30–11–2018 ರಿಂದ 10–12–2018 ರ ವರೆಗೆ**

**ಸಂಯೋಜನಾ ಶುಲ್ಕದ ಶೇಕಡಾ 30 ದಂಡ ಶುಲ್ಕದೊಂದಿಗೆ : ದಿನಾಂಕ 11–12–2018 ರಿಂದ 21–12–2018 ರ ವರೆಗೆ**

**ಶೇಕಡಾ 50 ದಂಡ ಶುಲ್ಕದೊಂದಿಗೆ : ದಿನಾಂಕ 07–01–2019 ರ ವರೆಗೆ**

**31–12–2018 ರ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

ನಿಗದಿತ ಅರ್ಜಿ ನಮೂನೆ ಮತ್ತು ಶುಲ್ಕ ಪಾವತಿಯ ಬಗ್ಗೆ ಮಾಹಿತಿಗಳನ್ನು ಲಗತ್ತಿಸಲಾಗಿದೆ. ಈ ಕುರಿತು ಅಗತ್ಯವಿದ್ದಲ್ಲಿ ಇನ್ನೂ ಹೆಚ್ಚಿನ ಮಾಹಿತಿಯನ್ನು ಕುಲಸಚಿವರ ಕಚೇರಿಯಿಂದ ಅಥವಾ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಿಂದ [www.mangaloreuniversity.ac.in] ಪಡೆದುಕೊಳ್ಳಬಹುದಾಗಿದೆ.

**ಅರ್ಜಿ ಸಲ್ಲಿಸುವಾಗ ಸಂಸ್ಥೆಗಳು ಈ ಕೆಳಗಿನ ಅಂಶಗಳನ್ನು ಗಮನಿಸತಕ್ಕದ್ದು:**

1. ಈಗಾಗಲೇ ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳು ಖಾಯಂ ಸಂಯೋಜನೆಗೆ ಅರ್ಜಿ ಸಲ್ಲಿಸುವಾಗ ಮುಂದುವರಿಕೆ ಸಂಯೋಜನೆಗೂ ಅರ್ಜಿ ಸಲ್ಲಿಸತಕ್ಕದ್ದು. ಅಲ್ಲದೆ ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸ ಬಯಸುವ ವಿದ್ಯಾಸಂಸ್ಥೆಗಳು/ ಕಾಲೇಜುಗಳು ಕಡ್ಡಾಯವಾಗಿ ಕನಿಷ್ಟ **ಸಿ++ ಗ್ರೇಡ್ ನ್ಯಾಕ್ ಅಕ್ರೆಡಿಟೇಶನ್** ಹೊಂದಿರತಕ್ಕದ್ದು.

2. ಶಾಶ್ವತ ಸಂಯೋಜನೆ ಹೊಂದಿರುವ ಅಥವಾ ಕನಿಷ್ಠ ಹತ್ತು ವರ್ಷಗಳ ಕಾಲ ಸತತವಾಗಿ ಸಂಯೋಜನೆ ಹೊಂದಿರುವ ಶಿಕ್ಷಣ ಸಂಸ್ಥೆಗಳು ಮತ್ತು **ನ್ಯಾಕ್‌ನಿಂದ ಮಾನ್ಯತೆ ಪಡೆದಿರುವ ಶಿಕ್ಷಣ ಸಂಸ್ಥೆಗಳು ಮಾತ್ರ ಸ್ನಾತಕೋತ್ತರ ಕೋರ್ಸುಗಳನ್ನು ಆರಂಭಿಸಲು ಅರ್ಹವಾಗಿರುತ್ತವೆ**.

3. ಮಂಗಳೂರು ವಿಶ್ವವಿದ್ಯಾನಿಲಯದಿಂದ ಅಧಿಕೃತವಾಗಿ ಅಧಿಸೂಚಿಸಲ್ಪಟ್ಟ ಕೋರ್ಸುಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

4. "ಅಲ್ಪ ಸಂಖ್ಯಾತ ವರ್ಗದ ಸಂಸ್ಥೆ" ಎಂದು ಪರಿಗಣಿಸಬೇಕಾದರೆ ಸರಕಾರಿ ಆದೇಶದ ದೃಢೀಕೃತ ಪ್ರತಿಯನ್ನು ಕಡ್ಡಾಯವಾಗಿ ಅರ್ಜಿ ಜೊತೆಗೆ ಲಗತ್ತಿಸತಕ್ಕದ್ದು.

5. ಬೋಧಕ ಸಿಬ್ಬಂದಿಗಳ ನೇಮಕಾತಿ ಮತ್ತು ಇತರ ವಿಷಯಗಳ ಬಗ್ಗೆ ಯುಜಿಸಿ/ ರಾಜ್ಯಸರಕಾರ/ ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

6. ಕ್ರೆಡಿಟ್ ಆಧಾರಿತ ಸೆಮಿಸ್ಟರ್ ಪದ್ಧತಿಯ ವಿನಿಯಮದ ಪ್ರಕಾರ ವಿದ್ಯಾರ್ಥಿಗಳಿಗೆ ಭಾಷಾ ವಿಷಯಗಳನ್ನು ಖಾಸಗಿಯಾಗಿ ವ್ಯಾಸಂಗ ಮಾಡಲು ಮತ್ತು ಸಂಯೋಜನೆ ಹೊಂದಿರದ ಭಾಷಾ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಬೋಧನೆ ಮಾಡಲು ಅವಕಾಶವಿರುವುದಿಲ್ಲ. ಆದುದರಿಂದ ಸಂಯೋಜಿತ ಕಾಲೇಜುಗಳು ಸಂಯೋಜನೆ ಹೊಂದಿರದ ಭಾಷಾ ವಿಷಯಗಳನ್ನು ಬೋಧಿಸಲು ಇಚ್ಛಿಸಿದಲ್ಲಿ, ಅಂತಹ ವಿಷಯಗಳಿಗೆ ಪ್ರತ್ಯೇಕ ಸಂಯೋಜನೆಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

7. ಕ್ರೆಡಿಟ್ ಆಧಾರಿತ ಸೆಮಿಸ್ಟರ್ ಪದ್ಧತಿಯಲ್ಲಿ ಅಳವಡಿಸಲಾದ "ಸಾಮಾನ್ಯ ಕಲಿಕೆ" (General Studies) ವಿಷಯಕ್ಕೆ, ಪಠ್ಯೇತರ ಚಟುವಟಿಕೆಗಳಿಗೆ (Co & extra curricular) ಮತ್ತು ಪ್ರಾರಂಭಿಸಲಿರುವ "ಅಂತರ್ ವಿಷಯ" (Inter Disciplinary) ವಿಷಯಗಳನ್ನು ಕಾಲೇಜಿನಲ್ಲಿ ಬೋಧಿಸಲು ಒದಗಿಸಲಾದ ಅವಕಾಶ/ ವ್ಯವಸ್ಥೆಗಳ ಬಗ್ಗೆ ವಿವರಗಳನ್ನು ಸಂಯೋಜನಾ ಅರ್ಜಿಯ ಜೊತೆಗೆ ಪ್ರತ್ಯೇಕವಾಗಿ ಲಗತ್ತಿಸತಕ್ಕದ್ದು.

8. **ಹೊಸದಾಗಿ ಮಹಿಳಾ ಕಾಲೇಜಿನ ಸಂಯೋಜನೆಗೆ ಅರ್ಜಿ ಸಲ್ಲಿಸುವ ಸಂಸ್ಥೆಯು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಸಲ್ಲಿಸುವಂತಿಲ್ಲ.**

ಆದೇಶದ ಮೇರೆಗೆ,

*ಸಹಿ/–*
**ಕುಲಸಚಿವರು**

ರಿಗೆ:

1) ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3) ಹೆಚ್ಚುವರಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ರಿಸರ್ಚ್ ಮತ್ತು ಟ್ರೈನಿಂಗ್), ಬೆಂಗಳೂರು.
4) ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
5) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ವಿಶ್ವವಿದ್ಯಾನಿಲಯ ಕಾಲೇಜು ಆವರಣ, ಹಂಪನಕಟ್ಟೆ, ಮಂಗಳೂರು– 01.
6) ಕುಲಸಚಿವರು (ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳು/ ಉಪ ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ.
7) ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
8) ಸಾರ್ವಜನಿಕ ಸಂಪರ್ಕಾಧಿಕಾರಿ, ಕುಲಸಚಿವರ ಕಛೇರಿ, ಮಂಗಳೂರು ವಿಶ್ವವಿದ್ಯಾನಿಲಯ.
9) ಕುಲಪತಿಯವರ ಆಪ್ತ ಕಾರ್ಯದರ್ಶಿ/ ಕುಲಸಚಿವರ ಆಪ್ತ ಸಹಾಯಕರು, ಮಂಗಳೂರು ವಿಶ್ವವಿದ್ಯಾನಿಲಯ.
10) ನಿರ್ದೇಶಕರು, DUIMS, ಮಂಗಳೂರು ವಿಶ್ವವಿದ್ಯಾನಿಲಯ– ಸದ್ರಿ ಅಧಿಸೂಚನೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.